ದಿನಾಂಕ 10-02-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಅರ್ಜಿದಾರರ ಪರವಾಗಿ ಶ್ರೀ ಎಸ್.ಎ **ವಕೀಲರಿಂದಃ**

ಈ ಅರ್ಜಿಯ ಅರ್ಜಿದಾರರು ಅಪಘಾತವಾದ ನಂತರ ಯಾವ ಸ್ಥಿತಿಯಲ್ಲಿ ಇದ್ದರು ಎನ್ನುವುದನ್ನು ನೀವು ಖುದ್ದು ಹೋಗಿ ನೋಡಿರುವುದಿಲ್ಲ ಎಂದರೆ ಹೌದು. ಅರ್ಜಿದಾರರ ಪರವಾಗಿ ಇಬ್ಬರು ವೈದ್ಯರನ್ನು ವಿಚಾರಣೆ ಮಾಡಿದ್ದು ಅವರ ಸಾಕ್ಷ್ಯ ವಿಚಾರಣೆಯನ್ನು ಓದಿ ಅರ್ಥ ಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಷಯಗಳಿಗೆ ಪೂರಕವಾದ ದಾಖಲೆಯನ್ನು ನಿಮ್ಮ ವತಿಯಿಂದ ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ. ಈ ಅರ್ಜಿಯ ವಿಷಯಗಳ ಬಗ್ಗೆ ಮಾಹಿತಿಯ ಕೊರತೆಯು ಇದ್ದ ಕಾರಣ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ. ಅರ್ಜಿದಾರರು ಅಪಘಾತದಿಂದ ಆಗಿದ್ದ ಗಾಯಗಳಿಂದಲೇ ಮೃತರಾಗಿರುತ್ತಾರೆ ಬೇರೆ ಯಾವುದೇ ಕಾರಣಗಳಿಂದ ಮೃತರಾಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಕುಟುಂಬಕ್ಕೆ ಪರಿಹಾರವನ್ನು ತುಂಬಿಸಿಕೊಡುವ ಹೊಣೆಗಾರಿಕೆಯಿಂದ ತಪ್ಪಿ ಸಿಕೊಳ್ಳಲು ಸುಳ್ಳು ಸಾಕ್ಷ್ಯ ವನ್ನು ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.